Sri S. M. KRISHNA.—How can I answer a question which is thrown up like this ? The question pertains to the date on which some of these Sections were commissioned and I have furnished the answers. If the non. Member wants any partieular information, he may frame a separate question.

ಶ್ರೀ ಬಿ. ಬೈರಪ್ಪಾಜಿ.—ಅವರಿಗೆ 92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅವರನ್ನು ಕರೆಸಿದ್ದರು ಎಂದು ಹೇಳಿದ್ದೀರಿ, ಅವರನ್ನು ವಾಪಸ್ಸು ಕಳುಹಿಸುವುದಕ್ಕೆ ಮುಂಚೆ ಅವರಿಂದ ಆಗ ಬೇಕಾದಂತಹ ಕೆಲಸವನ್ನು ಇಲ್ಲಿಯ ಸಿಬ್ಬಂದಿ ವರ್ಗದವರೇ ಮಾಡುವಂತೆ ಅವರಿಂದ ನಮ್ಮ ಸಿಬ್ಬಂದಿ ವರ್ಗದವರಿಗೆ ಟ್ರೈನಿಂಗ್ ಕೊಟ್ಟು ಆದನ್ನು ಪೂರ್ತಿ ಮಾಡಿ ಕಳುಹಿಸಿದ್ದೀರಾ, ಮತ್ತು ಅವರಿಗೆ 92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದಮೇಲೆ ಅದರಿಂದ ಅನುಕೂಲವಾಗಿದೆಯೇ ಅಥವಾ ಇಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಆ ಕೆಲಸ ಮುಗಿಯುವುದಕ್ಕೆ ಮುಂಚೆ ಆ ಟೆಕ್ನಿಷಿಯನ್ಸ್‌ಅನ್ನು ವಾಪಸು ಕಳುಹಿಸಿರತಕ್ಕ ಪ್ರಸಂಗ ನನ್ನ ಗಮನಕ್ಕೆ ಬಂದಿಲ್ಲ. ಆ ತಾಂತ್ರಿಕಜ್ಞರು ಅವರ ಕೆಲಸವನ್ನು ಮುಗಿಸಿದ ಮೇರೆ ಅವರ ಅವಶ್ಯಕತೆ ಏನೂ ಇಲ್ಲ, ಇನ್ನು ಅಲ್ಲಿ ನಡೆಯಬೇಕಾಗಿರತಕ್ಕ ಎಲ್ಲಾ ಕೆಲಸ ಕಾರ್ಯಗಳೂ ಮತ್ತು ಪ್ರೊಡಕ್ಷನ್ ಎಲ್ಲವನ್ನೂ ನಮ್ಮ ರಾಜ್ಯದ ಸಿಬ್ಬಂದಿ ವರ್ಗದವರೇ ಮಾಡತಕ್ಕ ಅರ್ಹತೆಯನ್ನು ಪಡೆದಿದ್ದಾರೆ. ಇನ್ನು ವಿದೇಶಿ ತಾಂತ್ರಿಜ್ಞರು ಬೇಕಾಗಿಲ್ಲ ಎಂದು ನಮ್ಮ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಜರ್ಮನಿಯ ತಾಂತ್ರಿಜ್ಞರು, ವಿದೇಶಿಯರು ಬಹಳ ಜನ ಇದ್ದಾರೆ, ಅವರಿಂದ ಆಗಬೇಕಾದಂತಹ ಕೆಲಸವನ್ನು ನಮ್ಮದೇಶದ ಜನಗಳೇ ಮಾಡುವಂತಹ ಶಕ್ತಿ ಇದೆ ಎಂದು ಎಸ್ಟಿಮೇಟ್ ಕಮಿಟಿಯವರು ವರದಿ ಮಾಡಲಿಲ್ಲವೇ ? ಆ ವರದಿಯನ್ನು ತಾವು ಕಾರ್ಯಗತ ಮಾಡಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಕೇವಲ ನ್ಯೂಪ್ಲಾಂಟ್ ಸ್ಪೀರ್ ಒಂದೇ ಅಲ್ಲ. ಅರಾಯ್ ಸ್ಪೀರ್ ಪ್ಲಾಂಟ್‌ನಲ್ಲಿ 83ಜನ ಇದ್ದರು. ಪಿಗ್ ಐರನ್ ಎರೆಕ್ಟಿಕ್ ಫರ್ನೇಸ್‌ನಲ್ಲಿ 24ಜನಗಳು ಇದ್ದರು. ರಿಫ್ರ್ಯಾಕ್ಟರಿ ಎಕ್ಸ್‌ಪ್ಯಾನ್‌ಷನ್‌ನಲ್ಲಿ 26 ಜನ ಇದ್ದರು. ಎಸ್ಟಿಮೇಟ್ ಕಮಿಟಿಯವರು ತಮ್ಮ ಅಭಿಪ್ರಾಯವನ್ನು ಹೊರಗಡವಿದ ಮೇಲೆ ಅಲ್ಲಿ ತಾಂತ್ರಿಕಜ್ಞರ ಅವಶ್ಯಕತೆ ಇಲ್ಲ ಎಂದು ಮ್ಯಾನೇಜ್‌ಮೆಂಟಿನವರು ಎಂದು ಒಂದು ನಿರ್ಧಾರಕ್ಕೆ ಬಂದಮೇಲೆ ಅವರೆಲ್ಲರನ್ನೂ ವಾಪಸ್ಸು ಕಳುಹಿಸಿದೆ.

ಉಪಾಧ್ಯಕ್ಷರು.—ಶ್ರೀ ಯು. ಟಿ.ಫರೀದ್ ಅವರು ಪ್ರಶ್ನೆ ನಂ. 805 ಕೇಳಬಹುದು.

Upgrading of Government Hospiatal, Coondapur

805. Sri U. T. FAREED (Magalore-II) [(on behelf of SRI A. G. KODGI (Baindur)].—

Will the Minister for Health be pleased to state :—

(*a*) whether any proposal has been received to upgrade the Government Hospital, Coondapur ;

(*b*) whether any proposal has been received to convert Kollur and Shiroor L. F. Dispensaries into Health Unit Type Dispensaries (Coondapur Taluk, South Kanara) ?

Sri H. SIDDAVEERAPPA (Minister for Health).—

(*a*) Yes.

(*b*) Orders sanctioning a Health Unit Type Dispensary at Kollur and to shift the existing Rural Dispensary (Ayurvedic) from Kollur to Kalthod village in Coondapur Taluk have been issued in G O. No. HMA 211 PPS 71, dated 24th November 1972.

Proposals for sanction of a Health Unit Type Dispensary at Shiroor has not been received.

ಶ್ರೀ ಯು. ಟಿ. ಫರೀದ್.—ನಾನು ಈ ಪ್ರಶ್ನೆಗೆ ನಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಲು ಬಯಸುವುದಿಲ್ಲ.

Hoarding of Foodgrains

352. **H. D. DEVE GOWDA** (Holenarasipur).—

Will the Minister of State for Food and Civil Supplies be pleased to state :—

(*a*) the number of persons in the State against whom action has been taken for hoarding essential commodities of daily need illegaly (Detailed information may be furnished upto 31st December 1972) ;

(*b*) out of them, the number of cases against whom prosecution were launched have been withdrawn (Detailed information may be furnished upto 31st December 1972) ?

Smt. E. E. VAZ (Minister of State for Food and Civil Supplies),—

(*a*) 3,356,

(*b*) 203. Further details can be had from the statement placed on the Table of the House.*

ಶ್ರೀ ಎಚ್. ಡಿ. ದೇವೇಗೌಡ.—ತಾವು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ 513 ಕೇಸುಗಳನ್ನು ಡ್ರಾಪ್ ಮಾಡರಾಗಿದೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

† ಶ್ರೀಮತಿ ಇ. ಇ. ವಾಜ್.—ಯಾವ ಕೇಸುಗಳು ಪ್ರೂವ್ ಆಗಿಲ್ಲ ಅಂಥಾ ಕೇಸುಗಳನ್ನೂ ಮತ್ತು ಮಿಸ್ಟೇಕ್ ಆಗಿರತಕ್ಕ ಕೇಸುಗಳನ್ನೂ ಡ್ರಾಪ್ ಮಾಡಿದೆ. ಮತ್ತು 3356 ಕೇಸುಗಳ ಸಂಬಂಧದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—203 ಕೇಸುಗಳನ್ನು ವಿತ್‌ಡ್ರಾ ಮಾಡಿದ್ದೇವೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಸರಿಯಾಗಿ ಪ್ರೂಫ್ ಇಲ್ಲದೆ ಇರತಕ್ಕ ಕೇಸುಗಳನ್ನೂ ಮತ್ತು ಆಫೀಸರುಗಳು ಕೊಟ್ಟಂತಹ ಕೇಸುಗಳಲ್ಲಿ ಮಿಸ್ಟೇಕ್ ಆಗಿದ್ದಂತಹ ಕೇಸುಗಳನ್ನೂ ವಿತ್‌ಡ್ರಾ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇ ಗೌಡ.—ಚಾರ್ಜ್ ಷೀಟ್ ಹಾಕುವಾಗ ನಿಮ್ಮ ಅಧಿಕಾರಿಗಳು ನೋಡುವುದಿಲ್ಲವೇ ; ಮತ್ತು ಇದು ನಿಮ್ಮ ಪಕ್ಷದ ರಾಜಕೀಯ ಒತ್ತಡದಿಂದ ಆಗಿರುವುದು ಎಂದು ಒಪ್ಪಿಕೊಳ್ಳುತ್ತೀರಾ ?

---

* Library *Vide* No. 23, Dated 26-3-1973,